19

ಶಾಖೆ / ವಿಷಯ : DEPARTMENT / SUBJECT: ಗೃಹ - KPSC

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE : 25/1/21

# ಪ್ರಶ್ನೆ ಪತ್ರಿಕೆ ಕೇಸಲ್ಲಿ 14 ಅರೆಸ್ಟ್

## ಕೆಪಿಎಸ್‌ಸಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣ: ನಿನ್ನೆ 8 ಮಂದಿ ಬಂಧನ

## ₹35 ಲಕ್ಷ, 4 ವಾಹನ ಜಪ್ತಿ | ಕೆಪಿಎಸ್‌ಸಿ ಕ್ಲರ್ಕ್‌ನಿಂದಲೇ ಸೋರಿಕೆ?

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಸಿಸಿಬಿ ಪೊಲೀಸರು ಭಾನುವಾರ ಎಂಟು ಮಂದಿಯನ್ನು ಬಂಧಿಸಿದ್ದಾರೆ. ಈ ಮೂಲಕ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 14ಕ್ಕೆ ಏರಿಕೆಯಾಗಿದೆ. ► 11

### ಫೇಸ್‌ಬುಕ್‌ನಲ್ಲಿ ಗ್ರಾಹಕರಿಗೆ ಗಾಳ

ಫೇಸ್‌ಬುಕ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ಇನ್ಸ್‌ಪೆಕ್ಟರ್ ಡಿ.ಎಸ್.ಚಂದ್ರು ತೆರೆದಿದ್ದ. ಅವರ ಮೂಲಕವೇ ಅಭ್ಯರ್ಥಿಗಳನ್ನು ಸಂಪರ್ಕ ಮಾಡುತ್ತಿದ್ದ. ಇನ್ನು ರಾಚಪ್ಪ ಹಾಗೂ ಚಂದ್ರು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದರು. ಈ ಹಿಂದೆಯೂ ವಿವಿಧ ಪ್ರಶ್ನೆಪತ್ರಿಕೆ ಸೋರಿಕೆಗಳಲ್ಲಿ ಇವರ ಕೈವಾಡವಿದೆ ಎನ್ನಲಾಗುತ್ತಿದೆ. ► 11

# ಫೇಸ್ ಬುಕ್‌ನಲ್ಲಿ ಗ್ರಾಹಕರಿಗೆ ಗಾಳ

► ಮೊದಲ ಪುಟದಿಂದ

ಚಂದ್ರು ಪರೀಕ್ಷಾ ಅಭ್ಯರ್ಥಿಗಳನ್ನೇ ಟಾರ್ಗೆಟ್ ಮಾಡುತ್ತಿದ್ದ. ಪ್ರತಿ ಜಿಲ್ಲಾ ಮಟ್ಟದಲ್ಲಿ ಅಭ್ಯರ್ಥಿಗಳನ್ನು ಗುರುತಿಸಲೆಂದೇ ತನ್ನ ಸಹಚರನೊಬ್ಬನನ್ನು ನೇಮಿಸಿದ್ದ. ಸಹಚರನಿಂದ ಮಾಹಿತಿ ಸಂಗ್ರಹಿಸಿ ಪರೀಕ್ಷೆ ಬರೆಯುವ ಅಭ್ಯರ್ಥಿಗಳ ಬಳಿ ಡೀಲ್ ಮಾಡಿಸುತ್ತಿದ್ದ. ಪ್ರಶ್ನೆ ಪತ್ರಿಕೆ ಸಂಗ್ರಹಿಸಲು ಬರುವ ಪರೀಕ್ಷಾ ಅಭ್ಯರ್ಥಿಗಳಿಗೆ ಮೊಬೈಲ್ ತರದಂತೆ ಸೂಚಿಸುತ್ತಿದ್ದ. ಕೇವಲ ಒಂದು ಪೇಪರ್ ಹಾಳೆ ತೆಗೆದುಕೊಂಡು ಬರುವಂತೆ ನಿಯಮ ರೂಪಿಸಿದ್ದ. ಹಣ ಇಲ್ಲದವರಿಂದ ಆರೋಪಿಗಳು ಬ್ಲ್ಯಾಂಕ್ ಚೆಕ್‌ಗಳನ್ನು ಪಡೆಯುತ್ತಿದ್ದರು. ಎಲ್ಲ ಆರೋಪಿಗಳ ಮೊಬೈಲ್‌ಗಳನ್ನು ಟೆಕ್ನಿಕಲ್ ಸೆಲ್‌ಗೆ ಕಳುಹಿಸಿ ಮೊಬೈಲ್ ರಿಟ್ರೀವ್ ಮಾಡಿ ವಾಟ್ಸ್‌ಆ್ಯಪ್ ಕರೆ, ಮೊಬೈಲ್ ಕರೆ, ಮೆಸೇಜ್‌ಗಳ ಮೂಲಕ ಉಳಿದ ಆರೋಪಿಗಳ ಜಾಡು ಹಿಡಿಯಲು ಸಿಸಿಬಿ ಮುಂದಾಗಿದೆ.